**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಶಿಡ್ಲಘಟ್ಟ**

ಸಿ.ಸಿ.440/2020

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಲಂಕೆ ಹನುಮಯ್ಯ ಕೆ. | ಸಿಡಬ್ಲೂಃ **07** |
| ತಂದೆ ಹೆಸರು ಃ | | ಅಂಜನೇಯ ಕೆ. ಸಿ. | ಪಿಡಬ್ಲೂಃ **04** |
| ವಯಸ್ಸು | ಃ | 49 ವರ್ಷ | ಪ್ರಮಾಣೀಕರಿಸಲಾದ ದಿನಾಂಕ |
| ವೃತ್ತಿ | ಃ | ಅಬಕಾರಿ ನಿರೀಕ್ಷಕರು, ಮಧುಗಿರಿ ಉಪ-ವಿಭಾಗ. | 06.08.2026 |
| ವಾಸ ಸ್ಥಳ | ಃ | ಮಧುಗಿರಿ | |

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ

ನಾನು ಶಿಡ್ಲಘಟ್ಟ ವಲಯದಲ್ಲಿ ಅಬಕಾರಿ ನಿರೀಕ್ಷಕನಾಗಿ ಜುಲೈ-**2019** ರಿಂದ ಆಗಸ್ಟ್-**2023** ರ ವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

**2.** ದಿನಾಂಕಃ **14.09.2020** ರಂದು ಚಾಸಾ-**9** ರವರು ನಿಪಿ-**5** ರಲ್ಲಿ ನಮೂದಿಸಿರುವ ಮದ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಹಸ್ತಾಂತರಿಸಿದ್ದು, ಅವುಗಳನ್ನು ಸ್ವೀಕರಿಸಿ ಹಿಂಬರಹ ಮಾಡಿರುತ್ತೇನೆ. ನಿಪಿ-**5** ರಲ್ಲಿ ಇರುವ ನನ್ನ ಸಹಿಯನ್ನು ನಿಪಿ-**5**(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಕೆ ವಿ ವಕೀಲರಿಂದಃ

ನಾನು ನಿಪಿ-**5** ರಲ್ಲಿ ವಿವರಿಸಿರುವ ಮದ್ಯವನ್ನು ಸ್ವೀಕರಿಸಿದ್ದೇನೆ ಎಂದು ಪ್ರತ್ಯೇಕವಾಗಿ ಯಾವುದೇ ಸ್ವೀಕೃತಿ ಪತ್ರವನ್ನು ನೀಡಿರುವುದಿಲ್ಲ, ನಿಪಿ-**5** ರ ಮೇಲೆ ಹಿಂಬರಹ ಮಾಡಿದ್ದೇನೆ. ನಿಪಿ-**5** ನ್ನು ನಮ್ಮ ಕಛೇರಿಯ ವಿಳಾಸಕ್ಕೆ ಕಳುಹಿಸಲಾಗಿದೆ ಎಂದರೆ ಸರಿ. ನಿಪಿ-**5** ರಲ್ಲಿ ನಮೂದಿಸಿರುವ ಮದ್ಯವನ್ನು ದಿನಾಂಕ **14.09.2020** ರಂದು ನೇರವಾಗಿ ಸ್ವೀಕರಿಸಿರುತ್ತೇನೆ. ನಾನು ಯಾವುದೇ ಮದ್ಯವನ್ನು ನಿಪಿ-**5** ರಂತೆ ಸ್ವೀಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-**9** ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಶಿಡ್ಲಘಟ್ಟ.